## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. 58/2019

ಚಾಸಾ- 2 ಫ್ರಾಸಾ-2

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 28-01-2026

| | | |
|---|---|---|
| ಹೆಸರು | : | ದರಸ ಮಹ್ಮದ |
| ತಂದೆಯ ಹೆಸರು | : | ಖಾದರ ಬಾಷಾ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ಗ್ರಾಮ ಲೆಕ್ಕಾಧಿಕಾರಿ |
| ವಾಸಸ್ಥಳ | : | ಅಷ್ಟಗಿ ತಾ.ಸಿಂದಗಿ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

ದಿಃ 11-05-2018 ರಂದು ಸೊನ್ನ ಗ್ರಾಮದಲ್ಲಿ ಗ್ರಾಮ ಲೆಕ್ಕಾಧಿಕಾರಿಯಾಗಿ ಕರ್ತವ್ಯದಲ್ಲಿ ಇದ್ದೆನು.

ಅದೇ ದಿನ ರಾತ್ರಿ 9-50 ಗಂಟೆಗೆ ತಹಶೀಲ್ದಾರ ಕಚೇರಿಯಿಂದ ನಮಗೆ ದೂರವಾಣಿ ಕರೆಮೂಲಕ ಸೊನ್ನ ಚೆಕಪೋಸ್ಟ ಹತ್ತಿರ ಹೋಗಲು ತಿಳಿಸಿರುತ್ತಾರೆ. ನಂತರ ಚೆಕಪೋಸ್ಟನಲ್ಲಿ ಕರ್ತವ್ಯದಲ್ಲಿದ್ದ ಅಧಿಕಾರಿಗಳು ನಮಗೆ ಸರಕಾರಿ ಪಂಚರನ್ನಾಗಿ ಅಲ್ಲಿಗೆ ಕರೆಸಿರುತ್ತೇವೆ ಎಂದು ತಿಳಿಸಿರುತ್ತಾರೆ. ಆ ಸಮಯದಲ್ಲಿ ಸ್ಥಳದಲ್ಲಿ ಒಂದು KA 32 D 5555 ಕಾರ ನಿಂತಿದ್ದು ಅದರಲ್ಲಿ ಮೂರು ಜನರು ಇದ್ದರು. ಅವರಲ್ಲಿ ಸಿದ್ದಪ್ಪ ಮತ್ತು ಬಸಪ್ಪ ಎನ್ನುವವರ ಬಳಿ ಹಣ ದೊರೆತಿರುತ್ತದೆ. ರೂ. 200/- ಮುಖಬೆಲೆಯ ಒಟ್ಟು 100 ನೋಟುಗಳು ಮತ್ತು ಕೋಮಣ್ಣ ಎನ್ನುವವರ ಬಳಿ ರೂ.500/- ಮುಖಬೆಲೆಯ ಒಟ್ಟು 98 ನೋಟುಗಳು ಇದ್ದವು. ಸದರಿ ಹಣಕ್ಕೆ ಸಂಬಂಧಿಸಿದ ದಾಖಲಾತಿ ವಿಚಾರಿಸಿದಾಗ ಅವರು ಗುಲ್ಬರ್ಗಾದ ಫೈನಾನ್ಸದಿಂದ ತೆಗೆದುಕೊಂಡು ಬಂದು ಈಗ ಘತ್ತರಗಾ ಹೋಗಿ ಬಂದು ಈಗ ಹೈದ್ರಾ

ದೇವಸ್ಥಾನಕ್ಕೆ ಹೋಗುತ್ತಿದ್ದೇವೆ ಎಂದು ತಿಳಿಸಿರುತ್ತಾರೆ. ನಂತರ ಹಣ ಜಪ್ತಿ ಪಡಿಸಿಕೊಂಡು ಶ್ರೀದೇವಿ ASI ರವರ ವಶಕ್ಕೆ ನೀಡಿರುತ್ತಾರೆ. ನಾನು ಪಂಚನಾಗಿ ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯನ್ನು ತೋರಿಸಿದ್ದು ಸಾಕ್ಷಿ ಅದರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಜಪ್ತಿ ಪಂಚನಾಮೆಯನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ತೆರೆದ ನ್ಯಾಯಾಲಯದಲ್ಲಿ ಒಂದು ಖಾಕಿ ಕವರನಲ್ಲಿ ಇರುವ ಒಟ್ಟು ರೂ. 69000/- ಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟಾಗಿ ಮು.ಮಾ. **1** ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SJG** ಪರವಾಗಿ **RMS** ವಕೀಲರಿಂದಃ-</u>

ದಿಃ 11-05-2018 ರಂದು ತಹಶೀಲ್ದಾರ ಕಚೇರಿಯಿಂದ ನಮಗೆ ದೂರವಾಣಿ ಕರೆಮೂಲಕ ಸೊನ್ನ ಚೆಕಪೋಸ್ಟ ಹತ್ತಿರ ಹೋಗಲು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮಗೆ ಕರೆ ಬಂದ ನಂತರ 10-15 ನಿಮಿಷಗಳಲ್ಲಿ ಚೆಕಪೋಸ್ಟ ಬಳಿ ಹೋಗಿರುತ್ತೇನೆ. ಜಪ್ತಿ ಪಡಿಸಿಕೊಂಡರು ಎಂದು ಹೇಳುವ ನೋಟುಗಳ ಸಂಖ್ಯೆಗಳನ್ನು ಹೇಳಲು ಬರುವುದಿಲ್ಲ. ನಾವು ಗುನ್ಹೆಸ್ಥಳಕ್ಕೆ ಹೋದಾಗ ಆರೋಪಿತರು ಕಾರಿನಿಂದ ಇಳಿದು ಕೆಳಗೆ ನಿಂತಿದ್ದರು. ಕಾರಿನ ಚಾಲಕನ ಹೆಸರು ನನಗೆ ಗೊತ್ತಿಲ್ಲ.

ನಾನು ಯಾವುದೇ ಗುನ್ಹೆಸ್ಥಳಕ್ಕೆ ಹೋಗಿಲ್ಲ ಮತ್ತು ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿಲ್ಲ ಮತ್ತು ಹಣ ಜಪ್ತಿ ಪಡಿಸಿಕೊಂಡಿಲ್ಲ ಎಂದು ಸೂಚಿಸುವುದು ಸರಿಯಲ್ಲ.

<u>ಮರು ವಿಚಾರಣೆಃ - ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ